# ಹೆಣ್ಣು ಹೆಣ್ಣೆಂದರೆ

ಮಹಿಳೆಯರ ಮೇಲಿನ ಪುರುಷಾಳ್ವಿಕೆಯ ಸಮಾಜ ಎಸಗುತ್ತಿರುವ ದೌರ್ಜನ್ಯಗಳನ್ನು ಕೊನೆಗಾಣಿಸಲು, ಮಹಿಳಾ ಹೋರಾಟಗಳು ತೀವ್ರಗತಿಯಲ್ಲಿಯೇ ನಡೆಯುತ್ತಿವೆ. ಸಾಮಾನ್ಯವಾಗಿ ಕೇಳಿಬರುವ ಒಂದು ಸಂಗತಿಯೆಂದರೆ, ಮೇಲುಜಾತಿಯ ಮಧ್ಯಮವರ್ಗದ ವಿದ್ಯಾವಂತ ಮಹಿಳೆಯರಿಂದ ನಡೆಯುತ್ತಿರುವ ಈ ವಿಮೋಚನೆಯ ಹೋರಾಟಗಳಿಗೆ ಹಲವಾರು ಮಿತಿಗಳೂ ಇವೆ ಎಂದು ಗುರುತಿಸಲಾಗಿದೆ. ತಮ್ಮ ನೋವನ್ನೆಲ್ಲಾ 'ಹುದುಗಲಾರದ ದುಃಖ ಹುದುಗಿರಿಸಿ ನಗೆಯಲ್ಲಿ' ಇರುವ ಮಧ್ಯಮ ಜಾತಿಗಳಲ್ಲಿರುವ ಸುಶಿಕ್ಷಿತರ ತಲ್ಲಣಗಳೇ ಈ ಅಧ್ಯಯನದ ಕೇಂದ್ರಬಿಂದುವೂ ಆಗಿರುವುದು ಸಹಜವೇ ಆಗಿದೆ. ಬಹುಪಾಲು ಇವೆಲ್ಲ ಪಠ್ಯವಾದಿ ಕೇಂದ್ರಿತ ವಿಮೋಚನೆಯ ಧ್ವನಿಗಳು. ಇವುಗಳೂ ಕೂಡ ಮಹಿಳಾ ವಿಮೋಚನೆಯ ದಾರಿಯನ್ನು ವಿಸ್ತೃತಗೊಳಿಸುವ ಪ್ರಯತ್ನಗಳೇ!

ಈ ಹೋರಾಟದ ಸಾಗರವು ಒಳಗೊಳ್ಳದೇ ಇರುವ ಅನೇಕ ಧ್ವನಿಹೀನ ಸಮುದಾಯಗಳೂ ಭಾರತದಲ್ಲಿವೆ ಎಂಬುದನ್ನು ಮರೆಯಬಾರದು. ಜಾತಿಪದ್ಧತಿಯ ಹೀನ ಆಚರಣೆಗೆ ಸಿಲುಕಿ ಮಾತು ಕಳೆದುಕೊಂಡಿರುವ ಅಸ್ಪೃಶ್ಯ ಸಮುದಾಯ, ಬುಡಕಟ್ಟು, ಅಲೆಮಾರಿ ಹಾಗೂ ತಳಸಮುದಾಯಗಳ ನತದೃಷ್ಟ ಶ್ರಮಜೀವಿ ಹೆಣ್ಣುಗಳ ನೋವುಗಳ ಆಳವನ್ನು ತಿಳಿಯದೆ ನಡೆಸುವ ಅಧ್ಯಯನಗಳು ಅಪರಿಪೂರ್ಣವಾಗಿರುತ್ತವೆ. ಈ ತಿಳಿವು ಇರುವ ಅಮೆರಿಕದ ಕಪ್ಪು ಜನಾಂಗದ ಸ್ತ್ರೀವಾದಿ ಕಾರ್ಯಕರ್ತೆ ಬೆಲ್ ಹುಕ್ಸ್ ಹೇಳುವ ಮಾತುಗಳು ಗಮನಾರ್ಹ: 'ನಮ್ಮ ಸ್ತ್ರೀವಾದಿ ಸಿದ್ಧಾಂತಗಳನ್ನು ರೂಪಿಸಿದವರು ಕೇಂದ್ರದಲ್ಲಿ ನೆಲೆಸಿದವರಾದ ಅನುಕೂಲಸ್ಥ ಮಹಿಳೆಯರೇ. ಇವರಿಗೆ ಅಂಚಿನ ಸಮುದಾಯಗಳ ಮಹಿಳೆಯರು ಮತ್ತು ಪುರುಷರ ವಾಸ್ತವಗಳನ್ನು ಕುರಿತ ಯಾವುದೇ ತಿಳಿವಾಗಲೀ, ಎಚ್ಚರವಾಗಲಿ ತೀರ ಕಷ್ಟಸಾಧ್ಯವೇ ಸರಿ. ಈ ಕಾರಣದಿಂದಾಗಿಯೇ ಸ್ತ್ರೀವಾದಿ ಸಿದ್ಧಾಂತಗಳು ಸಮಗ್ರವಾಗಿಲ್ಲ. ಎಲ್ಲ ವೈವಿಧ್ಯಮಯ ಮಾನವ ಅನುಭವಗಳನ್ನು ಒಳಗೊಂಡ ವಿಶಾಲ ವ್ಯಾಪ್ತಿಯ ವಿಶ್ಲೇಷಣೆಗಳ ಕೊರತೆ ಇಲ್ಲಿ ಎದ್ದು ಕಾಣುತ್ತದೆ'. ನೂರಾರು ಜಾತಿ, ಆದಿವಾಸಿಗಳು, ಅಲೆಮಾರಿ ಸಮುದಾಯಗಳಿರುವ ಭಾರತದಂತಹ ವೈವಿಧ್ಯತೆಯ ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆಯರನ್ನು ಕುರಿತ ಅಧ್ಯಯನಗಳು ಕೇವಲ ಪಠ್ಯಕೇಂದ್ರಿತವಾದರೆ ಸಾಲದು, ಅವರ ಬದುಕುತ್ತಿರುವ ಸಾಮಾಜಿಕ ಪರಿಸರದ ನಡುವೆಯೇ, ಅವರ ಬದುಕನ್ನು ನೋಡಿ ತಿಳಿಯಬೇಕು. ಆಗ ಮಾತ್ರ ಆ ಮಹಿಳೆಯರ ದಾರುಣ ಬದುಕಿನ ವಿರಾಟರೂಪ ಅರಿವಿಗೆ ಬರುತ್ತದೆ. ಇಲ್ಲವಾದಲ್ಲಿ ಈಗಿರುವ ಸಿದ್ಧ ವೈಭವೀಕರಣದ ವಿಶ್ಲೇಷಣೆಯು, ತರಗತಿಯ ಬೋಧನೆಯಂತೆ ಶುಷ್ಕವಾಗುತ್ತದೆ! ಇದೊಂದು ಸಾಂಸ್ಕೃತಿಕ ವಿಷಮತೆ.

ಸಮಾಜದ ಕೆಳಹಂತದಲ್ಲಿರುವ ಹೆಚ್ಚಿನ ಪ್ರಮಾಣದ ಮಹಿಳೆಯರು ದುಡಿಯುವವರೇ ಆಗಿದ್ದರೂ ಇವರ ಮೇಲಿನ 'ಪುರುಷ ಪ್ರಾಬಲ್ಯ'ದ ದೌರ್ಜನ್ಯಗಳು ಕಡಿಮೆಯಾಗಿಲ್ಲ. ಬೆಳಗ್ಗೆ ಸತ್ತ ಗಂಡನನ್ನು ಮಣ್ಣುಮಾಡಿ, ಹಸಿದ ಮಕ್ಕಳ ಸಲುವಾಗಿ ಮಧ್ಯಾಹ್ನ ಕೂಲಿಗೆ ಹೋದ ನಿಂಗವ್ವ, ರಾತ್ರಿ ಹೆರಿಗೆಯಾದ ನಂತರ ಬೆಳಗ್ಗೆ ಹಸುಳೆಯನ್ನು ಎದೆಗೆ ಕಟ್ಟಿಕೊಂಡು ಇಟ್ಟಿಗೆ ಗೂಡಿಗೆ ಕೂಲಿ ಮಾಡಲು ಹೋದ ಮಾಂಕಾಳಮ್ಮ, ಸಾಲ ಪಡೆದ ಹಣವನ್ನು ಹಿಂದಿರುಗಿಸಲಾಗದಿದ್ದಕ್ಕೆ ಪಾತಮ್ಮನನ್ನು ಸಾಹುಕಾರ ಕಂಬಕ್ಕೆ ಕಟ್ಟಿಸಿ, ಎಲ್ಲರೆದರು ಉಟ್ಟ ಸೀರೆಯನ್ನು ಸೆಳೆದು ಸೆಬ್ಬೆಯಲ್ಲಿ ಹೊಡೆದ! ಆ ಕ್ಷಣದ ಪಾತಮ್ಮನ ಮನಸ್ಸಿನ ಕೋಲಾಹಲ! ಕೆರೆಯೊಂದಕ್ಕೆ ಊರಿನವರ ಒತ್ತಾಯಕ್ಕೆ ಮಣಿದು ತಮ್ಮ ಮಗನನ್ನೇ ಬಲಿಕೊಟ್ಟ ಕಲ್ಲುಒಡ್ಡ ಕುಟುಂಬದ ಹಿಂಗಲಾರದ ನೋವು... ಕಣ್ಣು ತೆರೆದು ನೋಡಿದರೆ ನಮ್ಮನ್ನು ಕಲ್ಲೆದೆಯವರನ್ನಾಗಿಸುವ ಇಂತಹ ಘಟನೆಗಳು ತಳಸಮುದಾಯಗಳು ಹೆಚ್ಚಾಗಿರುವ ನಮ್ಮ ಸಮಾಜದಲ್ಲಿ ನೂರಾರಿವೆ. ಇಂತಹ ದಾರುಣ ಬಡತನದ ಪರಿಸರದಿಂದ ಬಂದಿರುವ ಮಹಿಳೆಯರು ಇರುವೆಡೆಯೆಲ್ಲಾ ಹಲವರು ಕೌಟುಂಬಿಕ ಹಾಗೂ ಸಾಮಾಜಿಕ ಕಾರಣಗಳಿಗಾಗಿ ದಮನಕ್ಕೆ ಒಳಗಾಗುತ್ತಲೇ ಇರುವುದು ಭಾರತದಲ್ಲಿ ಸಹಜವಾದ ವಿದ್ಯಮಾನವಾಗಿದೆ. ದುರಂತವೆಂದರೆ ಇವು ಎಲ್ಲಿಯೂ ದಾಖಲೆಯಾಗದ ಹುದುಗಿರಿಸಲಾಗದ ಸಂಕಟಗಳು! ಇಂತಹ ಪುರುಷ ಕ್ರೌರ್ಯದ ಒಡಲಿನಿಂದಲೇ ಬಂದ ಜನಪದ ಗೀತೆಯೊಂದು: 'ಹೆಣ್ಣು ಆಗುದಕಿಂತ ಮಣ್ಣು ಆಗುದು ಲೇಸು/ ಮಣ್ಣಿನ ಮೇಲೆ ಮರವಾಗಿ ಇದ್ದರೆ/ ತಣ್ಣನೆಯ ನೆಳಲಾಗಿ ಇದ್ದೇನು' ಮಹಿಳೆಯರ ಖಾಸಗಿ ಬದುಕಿನ ಸಂಕಟಗಳು ಹೇಗೆ ಕಾಲದೇಶಗಳನ್ನು ದಾಟಿ ಇಡೀ ಸ್ತ್ರೀ ಸಮೂಹದ ಸಂಕಟವಾಗಿ ಅಭಿವ್ಯಕ್ತಿ ಕಂಡಿತು ಎಂಬುದನ್ನು ಈ ತ್ರಿಪದಿ ಸೂಚಿಸುತ್ತದೆ.

ಗುಜರಾತ್‌ನಲ್ಲಿ ಬಿಲ್ಕೀಸ್ ಬಾನುವಿನ ಮೇಲೆಸಗಿದ ಕ್ರೌರ್ಯವನ್ನು ಹೇಳಲು ಶಬ್ದಗಳೂ ನಾಚಿಕೊಳ್ಳಬಹುದು! ಹಾಗೆಯೇ ಹತ್ರಾಸ್‌ನಲ್ಲಿ ದಲಿತ ಹೆಣ್ಣಿನ ಮೇಲೆ ಅತ್ಯಾಚಾರ ನಡೆಸಿ ಅವಳನ್ನು ಅವರ ಹೆತ್ತವರ ಕಣ್ಣುಗಳ ಮುಂದೆಯೇ ಸುಟ್ಟ ಘಟನೆ ಪುರುಷಾಧಿಕಾರದ ಎಲ್ಲೆ ಮೀರಿದ ವಿಕೃತ ರೂಪವಲ್ಲದೆ ಮತ್ತೇನೂ ಅಲ್ಲ! ಸಹಗಮನ ಪದ್ಧತಿಯಷ್ಟೇ ಕ್ರೂರವಾದ ಇಂತಹ ಘಟನೆಗಳು ಭಾರತದ ಸಾಮಾಜಿಕ ವ್ಯವಸ್ಥೆಗೆ ತಗುಲಿರುವ ವಾಸಿಯಾಗದ ರೋಗವನ್ನು ಸೂಚಿಸುತ್ತವೆ. ಹೊಸ ಸಂಸತ್ ಭವನ ಉದ್ಘಾಟನೆಯಾಗುವ ಮುಹೂರ್ತದಲ್ಲೇ ಅದೇ ಸಂಸತ್ ಭವನದ ಹೊರಗೆ ಭಾರತಕ್ಕೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಕೀರ್ತಿ ತಂದುಕೊಟ್ಟ ಮಹಿಳಾ ಕುಸ್ತಿಪಟುಗಳು ತಮ್ಮ ಮೇಲಾಗಿರುವ ಲೈಂಗಿಕ ದೌರ್ಜನ್ಯಕ್ಕೆ ನ್ಯಾಯಕ್ಕಾಗಿ ಪ್ರತಿಭಟಿಸುತ್ತಿದ್ದಾಗ ಅವರ 'ಮನದ ಮಾತನ್ನು' ಕೇಳಲು ನಿರಾಕರಿಸಿದ ಸಂಸತ್ತು ಪೊಲೀಸರ ಮೂಲಕ ಲಾಠಿ ಚಾರ್ಜ್ ಮಾಡಿಸಿ ಕ್ರೀಡಾಪಟುಗಳನ್ನು ಬಂಧಿಸಿತು. ಇದು ದೇಶದ ಮಹಿಳೆಯರ ಹೀನ ಸ್ಥಿತಿಗೆ ಸಂಕೇತವಾಗಿ ಕಾಣುತ್ತಿದೆ. ಇದೆಲ್ಲವನ್ನೂ ನೋಡಿದರೆ ಎಲ್ಲ ಕಾಲದಲ್ಲೂ 'ಅಬಲಾವೃಂದ ಸಮಸುಖ ದುಃಖಿಗಳು' ಎನಿಸದೆ ಇರದು!

ಮಹಿಳೆಯರಲ್ಲಿರುವ ಪ್ರತಿರೋಧಕ ಗುಣವನ್ನೇ ಹೊಸಕಿಹಾಕುವಷ್ಟು ಬಲಶಾಲಿಯಾಗಿರುವ ಈ ವ್ಯವಸ್ಥೆಯಲ್ಲಿ ಮಹಿಳೆಯರನ್ನು 'ಪಂಜರದಲ್ಲಿನ ಗಿಳಿ'ಯಂತೆ ನೋಡಿಕೊಳ್ಳಲಾಗುತ್ತಿದೆ. ಮಹಿಳೆಯರಿಂದ ಪ್ರತಿರೋಧ ಒಡ್ಡದೆ ಇರುವ ವಿಧೇಯತೆಯನ್ನು ಈ ಸಮಾಜ ಬಯಸುತ್ತಿದೆ. ಇದನ್ನೆಲ್ಲಾ ಕಂಡೇ ಅನಿಬೆಸೆಂಟ್ ಹೇಳಿದರು, 'ಪುರುಷರಂತೆ ಮಹಿಳೆಯರಿಗೂ ಇರುವ ಹಕ್ಕುಗಳನ್ನು ಅಲ್ಲಗಳೆಯುವುದು ಮಾನವತೆಯಲ್ಲಿ ಮಹಿಳೆಯರ ಪಾತ್ರವನ್ನೇ ಅಲ್ಲಗಳೆದಂತೆ. ಇಂತಹ ಸಮಾಜ ನ್ಯಾಯಯುತ ತಳಹದಿಯ ಮೇಲೆ ನಿಲ್ಲಲು ಸಾಧ್ಯವೇ ಇಲ್ಲ'.

**■ ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಯಾವ ವಿಶ್ವವಿದ್ಯಾಲಯವೂ ಕಲಿಸಲಾರದಷ್ಟು ಪಾಠವನ್ನು ಬಡತನ ಕಲಿಸುತ್ತದೆ.
  —ಅನಕೃ
- ಕಲಿಯಲು ತಿರಸ್ಕರಿಸುವುದು ಜೀವಿಸಲು ತಿರಸ್ಕರಿಸುವುದಕ್ಕೆ ಸಮವಾದುದು.
  —ರಾಮಕೃಷ್ಣ ಪರಮಹಂಸ
- ಸ್ವಲ್ಪ ಉಳ್ಳವನು ಬಡವನಲ್ಲ, ಇನ್ನೂ ಬೇಕೆನ್ನುವವನೇ ಬಡವ.
  —ಸೆನೆಕಾ
- ಯಾರನ್ನಾದರೂ ಸೋಲಿಸುವುದು ಸುಲಭ, ಆದರೆ ಗೆಲ್ಲುವುದು ತುಂಬ ಕಷ್ಟ.
  —ಎ.ಪಿ.ಜೆ. ಅಬ್ದುಲ್ ಕಲಾಂ
- ಇಂದ್ರಿಯಗಳ ದಾಸನು ದುಃಖಗಳ ದಾಸನೂ ಆಗುತ್ತಾನೆ.
  —ಐನ್‌ಸ್ಟೀನ್
- ತಿಳಿಯದವನು, ಶ್ರದ್ಧೆ ಇಲ್ಲದವನು ಸಂಶಯಕ್ಕೊಳಗಾಗಿ ನಾಶ ಹೊಂದುವನು.
  —ಭಗವದ್ಗೀತೆ
- ಆತ್ಮಶ್ರದ್ಧೆ ಇಲ್ಲದವರು ಭಗವಂತನಲ್ಲಿ ಶ್ರದ್ಧೆ ಹೊಂದಿರಲು ಸಾಧ್ಯವಿಲ್ಲ.
  —ಗುರು ನಾನಕ್
- ಎಲ್ಲರನ್ನೂ ಪ್ರೀತಿಸು, ಅದರಲ್ಲಿ ಕೆಲವರನ್ನಷ್ಟೇ ನಂಬು, ಆದರೆ ಯಾರಿಗೂ ಕೇಡು ಬಗೆಯಬೇಡ.
  —ವಿಲಿಯಂ ಶೇಕ್ಸ್‌ಪಿಯರ್